ಅಸಲು ದಾವೆ ನಂ.17/2016

ಪಿ.ಡಬ್ಲೂಃ 1- ಜಯಮ್ಮ ಬಿನ್ ವೆಂಕಟಪ್ಪ

ದಿನಾಂಕಃ 20/02/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು 7 ನೇ ಪ್ರತಿವಾದಿ ಪರವಾಗಿ ಶ್ರೀ ಕೆ.ವಿ.ವಿ. ವಕೀಲರಿಂದ**

(ಸಾಕ್ಷಿಗೆ ಕನ್ನಡ ಭಾಷೆ ಅರ್ಥವಾಗುವುದಿಲ್ಲ ಮತ್ತು ಕೇವಲ ತೆಲುಗು ಭಾಷೆ ಅರ್ಥವಾಗುತ್ತದೆ ಎಂದು ಹೇಳಿರುವುದರಿಂದ ಕನ್ನಡ ಮತ್ತು ತೆಲುಗು ಭಾಷೆ ಬಲ್ಲವರಾದ ಶ್ರೀಮತಿ ಇ.ಬಿ. ವಕೀಲರನ್ನು ಭಾಷಾಂತರಕಾರ ಎಂದು ನೇಮಕ ಮಾಡಲಾಗಿರುತ್ತದೆ).

7. ನಿಪಿ-21, 22 ಮತ್ತು 23ರ ಸ್ವತ್ತುಗಳು ನಮ್ಮ ಕುಟುಂಬದ ಸ್ವತ್ತುಗಳಾಗಿರುತ್ತವೆ ಎಂದು ನಮಗೆ ಮೊದಲೇ ಗೊತ್ತಿತ್ತು ಎಂದರೆ ಸರಿ. ನಾವು ಸದರಿ ಸ್ವತ್ತುಗಳನ್ನು ಉದ್ದೇಶಕಪೂರ್ವಕವಾಗಿ ಮೊದಲು ದಾವೆಯಲ್ಲಿ ಸೇರಿಸಿರಲಿಲ್ಲ ಮತ್ತು ಪ್ರತಿವಾದಿಯರು ನನ್ನ ಪಾಟೀ ಸವಾಲಿನಲ್ಲಿ ಸದರಿ ಸ್ವತ್ತುಗಳ ಬಗ್ಗೆ ಪ್ರಶ್ನೆ ಮಾಡಿದ್ದಕ್ಕೆ ನಾವು ನಂತರ ಅವುಗಳನ್ನು ಸೇರಿಸಿ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ದಾವಾ ಐಟಂ ನಂ.1 ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಮತ್ತು ಕೇವಲ ಉಳಿದ ದಾವಾ ಸ್ವತ್ತುಗಳಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ಸ್ವತ್ತಿನಲ್ಲಿಯೂ ಸಹ ಭಾಗ ಪಡೆಯು ಉದ್ದೇಶದಿಂದ ನಾವು ಸುಳ್ಳು ದಾವೆ ದಾಖಲಿಸಿ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್

**ಪಾಟೀ ಸವಾಲು 1, 2 ಮತ್ತು 8 ನೇ ಪ್ರತಿವಾದಿ ಪರ ವಕೀಲರುಗಳಿಂದಃ**

ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್